ಸೂ. 54 | **41.ಹಾಮೀಮ್ ಅಸ್ಸಜ್ದಃ** | ರು. 6

آياتها ٥٤ سُوْرَةُ حٰمٓ السَّجْدَةِ مَكِّيَّةٌ ركوعاتها ٦

(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಹಾಮೀಮ್.

حٰمٓ ۚ ﴿١﴾

2. ಇದು ಪರಮ ದಯಾಮಯನೂ ಕರುಣಾನಿಧಿಯೂ ಆದವನ ಕಡೆಯಿಂದ ಅವತೀರ್ಣ ಗೊಳಿಸಲ್ಪಟ್ಟುದಾಗಿದೆ.

تَنْزِيْلٌ مِّنَ الرَّحْمٰنِ الرَّحِيْمِ ۚ ﴿٢﴾

3. ಸೂಕ್ತಗಳು ಸುಸ್ಪಷ್ಟವಾಗಿ ವಿವರಿಸಲ್ಪಟ್ಟಿರುವ ಗ್ರಂಥವಿದು. ಜ್ಞಾನವುಳ್ಳವರಿಗಾಗಿ ಅರಬೀ ಭಾಷೆಯ ಕುರ್‌ಆನ್.

كِتٰبٌ فُصِّلَتْ اٰيٰتُهٗ قُرْاٰنًا عَرَبِيًّا
لِّقَوْمٍ يَّعْلَمُوْنَ ۙ ﴿٣﴾

4. ಸುವಾರ್ತೆ ಹಾಗೂ ಎಚ್ಚರಿಕೆ ನೀಡುವಂತಹದು. ಆದರೆ ಇವರಲ್ಲಿ ಹೆಚ್ಚಿನವರು ಇದರಿಂದ ವಿಮುಖರಾದರು ಮತ್ತು ಅವರು ಕಿವಿ ಗೊಡುವುದಿಲ್ಲ.

بَشِيْرًا وَّنَذِيْرًا ۚ فَاَعْرَضَ اَكْثَرُهُمْ
فَهُمْ لَا يَسْمَعُوْنَ ﴿٤﴾

5. "ನೀವು ಯಾವುದರ ಕಡೆಗೆ ನಮ್ಮನ್ನು ಕರೆಯುತ್ತಿರುವಿರೋ ಅದರ ಬಗ್ಗೆ ನಮ್ಮ ಹೃದಯಗಳ ಮೇಲೆ ಹೊದಿಕೆಗಳು ಹೊದಿಸಲ್ಪಟ್ಟಿವೆ. ನಮ್ಮ ಕಿವಿಗಳು ಕಿವುಡಾಗಿ ಬಿಟ್ಟಿವೆ. ನಮ್ಮ ಮತ್ತು ನಿಮ್ಮ ನಡುವೆ ಒಂದು ತೆರೆ ಬಿದ್ದಿದೆ. ನೀವು ನಿಮ್ಮ ಕೆಲಸ ಮಾಡಿರಿ, ನಾವು ನಮ್ಮ ಕೆಲಸ ಮಾಡುತ್ತ ಹೋಗುವೆವು" ಎನ್ನುತ್ತಾರೆ.

وَقَالُوْا قُلُوْبُنَا فِيْٓ اَكِنَّةٍ مِّمَّا تَدْعُوْنَآ
اِلَيْهِ وَفِيْٓ اٰذَانِنَا وَقْرٌ وَّمِنْۢ بَيْنِنَا
وَبَيْنِكَ حِجَابٌ فَاعْمَلْ اِنَّنَا عٰمِلُوْنَ ﴿٥﴾

6. ಸಂದೇಶವಾಹಕರೇ, ಇವರೊಡನೆ ಹೇಳಿರಿ, "ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯನೇ ಆಗಿದ್ದೇನೆ. ನಿಮ್ಮ ಆರಾಧ್ಯನು ಏಕಮಾತ್ರ ಆರಾಧ್ಯನಾಗಿರುವನೆಂದು ನನಗೆ 'ದಿವ್ಯವಾಣಿ' ಮೂಲಕ ತಿಳಿಸಲಾಗುತ್ತದೆ. ಆದುದರಿಂದ ನೀವು ನೇರವಾಗಿ ಅವನದೇ ದಿಕ್ಕನ್ನು ಅನುಸರಿಸಿರಿ ಮತ್ತು ಅವನೊಡನೆ ಕ್ಷಮೆ ಯಾಚಿಸಿರಿ. ಬಹುದೇವವಿಶ್ವಾಸಿಗಳಿಗೆ ವಿನಾಶವಿದೆ.

قُلْ اِنَّمَآ اَنَا بَشَرٌ مِّثْلُكُمْ يُوْحٰٓى اِلَيَّ
اَنَّمَآ اِلٰهُكُمْ اِلٰهٌ وَّاحِدٌ فَاسْتَقِيْمُوْٓا
اِلَيْهِ وَاسْتَغْفِرُوْهُ ۗ وَوَيْلٌ لِّلْمُشْرِكِيْنَ ۙ ﴿٦﴾

7. ಅವರು ಝಕಾತ್ ಕೊಡದವರು ಹಾಗೂ ಪರಲೋಕ ಜೀವನವನ್ನು ನಿರಾಕರಿಸುವವರು.

الَّذِيْنَ لَا يُؤْتُوْنَ الزَّكٰوةَ وَهُمْ بِالْاٰخِرَةِ هُمْ كٰفِرُوْنَ ۝٧

8. ಆದರೆ ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗಿದವರಿಗಾಗಿ ಖಂಡಿತವಾಗಿಯೂ ಎಂದೂ ಕೊನೆಗೊಳ್ಳದಂತಹ ಸತ್ಫಲವಿದೆ."

اِنَّ الَّذِيْنَ اٰمَنُوْا وَعَمِلُوا الصّٰلِحٰتِ لَهُمْ اَجْرٌ غَيْرُ مَمْنُوْنٍ ۝٨

9. ಸಂದೇಶವಾಹಕರೇ, ಇವರೊಡನೆ ಹೇಳಿರಿ- "ಭೂಮಿಯನ್ನು ಎರಡೇ ದಿನಗಳಲ್ಲಿ ಸೃಷ್ಟಿಸಿದಂತಹ ದೇವನನ್ನು ನೀವು ನಿರಾಕರಿಸುತ್ತೀರಾ? ಮತ್ತು ಇತರರನ್ನು ಅವನಿಗೆ ಸರಿಸಮಾನರಾಗಿ ಮಾಡುತ್ತೀರಾ? ಸಕಲ ಲೋಕಗಳ ಪಾಲಕ ಪ್ರಭು ಅವನೇ ತಾನೆ.

قُلْ اَئِنَّكُمْ لَتَكْفُرُوْنَ بِالَّذِيْ خَلَقَ الْاَرْضَ فِيْ يَوْمَيْنِ وَتَجْعَلُوْنَ لَهٗٓ اَنْدَادًا ۭ ذٰلِكَ رَبُّ الْعٰلَمِيْنَ ۝٩

10. ಅವನು (ಭೂಮಿಯನ್ನು ಅಸ್ತಿತ್ವಕ್ಕೆ ತಂದ ಬಳಿಕ) ಅದರ ಮೇಲೆ ಪರ್ವತಗಳನ್ನು ನಾಟಿದನು. ಅದರಲ್ಲಿ ಸಮೃದ್ಧಿಗಳನ್ನಿರಿಸಿದನು ಮತ್ತು ಅದರಲ್ಲಿ ಎಲ್ಲ ಅಪೇಕ್ಷಕರಿಗಾಗಿ[1] ಅವರವರ ಅಗತ್ಯಾನುಸಾರ, ಸರಿಯಾದ ಪ್ರಮಾಣದಲ್ಲಿ ಆಹಾರ ವಸ್ತುಗಳನ್ನು ಒದಗಿಸಿದನು. ಈ ಕಾರ್ಯಗಳೆಲ್ಲ ನಾಲ್ಕು ದಿನಗಳಲ್ಲಾದವು."

وَجَعَلَ فِيْهَا رَوَاسِيَ مِنْ فَوْقِهَا وَبٰرَكَ فِيْهَا وَقَدَّرَ فِيْهَآ اَقْوَاتَهَا فِيْٓ اَرْبَعَةِ اَيَّامٍ ۭ سَوَاۗءً لِّلسَّاۗىِٕلِيْنَ ۝١٠

11. ತರುವಾಯ ಅವನು ಆಕಾಶದ ಕಡೆಗೆ ಗಮನ ಹರಿಸಿದನು.[2] ಆಗ ಅದು ಕೇವಲ ಹೊಗೆಯಾಗಿತ್ತು. ಅವನು ಆಕಾಶ-ಭೂಮಿಗಳೊಡನೆ, "ನೀವು ಬಯಸಿದರೂ ಬಯಸದಿದ್ದರೂ ಅಸ್ತಿತ್ವಕ್ಕೆ ಬಂದು ಬಿಡಿರಿ" ಎಂದನು. ಅವೆರಡೂ, "ನಾವು ಆಜ್ಞಾಪಾಲಕರಂತೆ ಬಂದು ಬಿಟ್ಟೆವು" ಎಂದವು.

ثُمَّ اسْتَوٰٓى اِلَى السَّمَاۗءِ وَهِىَ دُخَانٌ فَقَالَ لَهَا وَلِلْاَرْضِ ائْتِيَا طَوْعًا اَوْ كَرْهًا ۭ قَالَتَآ اَتَيْنَا طَاۗىِٕعِيْنَ ۝١١

12. ಆಗ ಅವನು ಎರಡು ದಿನಗಳೊಳಗೆ ಸಪ್ತಗಗನಗಳನ್ನು ಉಂಟು ಮಾಡಿದನು ಮತ್ತು ಎಲ್ಲ ಆಕಾಶಗಳಲ್ಲೂ ಅದರ ಕಾನೂನನ್ನು 'ದಿವ್ಯವಾಣಿ' ಮಾಡಿಬಿಟ್ಟನು. ಭೂಲೋಕದ ಆಕಾಶವನ್ನು ನಾವು ದೀಪಗಳಿಂದ ಅಲಂಕರಿಸಿದೆವು ಮತ್ತು ಅದನ್ನು ಚೆನ್ನಾಗಿ ಸುರಕ್ಷಿತಗೊಳಿಸಿದೆವು. ಇವೆಲ್ಲವೂ ಓರ್ವ ಪ್ರಬಲನೂ ಸರ್ವಜ್ಞನೂ ಆಗಿರುವಾತನ ಯೋಜನೆಯಾಗಿದೆ.

فَقَضٰىهُنَّ سَبْعَ سَمٰوَاتٍ فِيْ يَوْمَيْنِ وَاَوْحٰى فِيْ كُلِّ سَمَاۗءٍ اَمْرَهَا ۭ وَزَيَّنَّا السَّمَاۗءَ الدُّنْيَا بِمَصَابِيْحَ ڰ وَحِفْظًا ۭ ذٰلِكَ تَقْدِيْرُ الْعَزِيْزِ الْعَلِيْمِ ۝١٢

1. ಅರ್ಥಾತ್- ಆಹಾರವನ್ನು ಬಯಸುವ ಪ್ರತಿಯೊಂದು ಜೀವಿಗೆ.

2. ಭೂಮಿಯನ್ನು ಸೃಷ್ಟಿಸಿದ ಮತ್ತು ಅದನ್ನು ಜನವಾಸಕ್ಕೆ ಅರ್ಹಗೊಳಿಸಿದ ನಂತರ ಅವನು ಆಕಾಶವನ್ನು ಸೃಷ್ಟಿಸಿದನು ಎಂದು ಇದರ ಅರ್ಥವಲ್ಲ. ಇಲ್ಲಿ 'ತರುವಾಯ' ಎಂಬ ಪದ ಕಾಲಕ್ರಮಕ್ಕಾಗಿ ಉಪಯೋಗವಾಗಿಲ್ಲ ಬದಲಾಗಿ ಅನುಕ್ರಮವಾದ ವರ್ಣನೆಗೆ ಉಪಯೋಗವಾಗಿದೆ. ಅನಂತರದ ವಾಕ್ಯಗಳು ಇದನ್ನು ಸ್ಪಷ್ಟಪಡಿಸುತ್ತವೆ.

13. ಇವರೀಗ ವಿಮುಖರಾಗುತ್ತಾರೆಂದಾದರೆ ಇವರೊಡನೆ ಹೇಳಿರಿ, "ನಾನು ನಿಮ್ಮನ್ನು, ಆದ್ ಮತ್ತು ಸಮೂದರ ಮೇಲೆ ಎರಗಿದ್ದಂತಹ, ಹಠಾತ್ತನೆ ಸಿಡಿದು ಬೀಳುವ ಒಂದು ಯಾತನೆಯ ಬಗ್ಗೆ ಎಚ್ಚರಿಸುತ್ತೇನೆ."

فَإِنْ أَعْرَضُوا فَقُلْ أَنذَرْتُكُمْ صٰعِقَةً مِّثْلَ صٰعِقَةِ عَادٍ وَّثَمُودَ ﴿١٣﴾

14. ದೇವ ಸಂದೇಶವಾಹಕರು ಅವರ ಮುಂದಿನಿಂದಲೂ ಹಿಂದಿನಿಂದಲೂ ಎಲ್ಲ ದಿಕ್ಕುಗಳಿಂದಲೂ ಅವರ ಬಳಿ ಬಂದು, "ನೀವು ಅಲ್ಲಾಹನ ಹೊರತು ಇನ್ನಾರ ದಾಸ್ಯ-ಆರಾಧನೆಯನ್ನೂ ಮಾಡಬೇಡಿರಿ" ಎಂದು ಹೇಳಿದಾಗ ಅವರು, "ನಮ್ಮ ಪ್ರಭು ಇಚ್ಛಿಸುತ್ತಿದ್ದರೆ ದೇವಚರರನ್ನು ಕಳುಹಿಸುತ್ತಿದ್ದನು. ಆದುದರಿಂದ ನೀವು ಯಾವುದಕ್ಕಾಗಿ ಕಳುಹಿಸಲ್ಪಟ್ಟಿರುವಿರೋ ಅದನ್ನು ನಾವು ನಿರಾಕರಿಸುತ್ತೇವೆ" ಎಂದರು.

إِذْ جَآءَتْهُمُ الرُّسُلُ مِنۢ بَيْنِ أَيْدِيهِمْ وَمِنْ خَلْفِهِمْ أَلَّا تَعْبُدُوٓا إِلَّا اللّٰهَ ؕ قَالُوا لَوْ شَآءَ رَبُّنَا لَأَنزَلَ مَلٰٓئِكَةً فَإِنَّا بِمَآ أُرْسِلْتُم بِهٖ كٰفِرُونَ ﴿١٤﴾

15. ಆದ್ (ಜನಾಂಗದವರು) ಯಾವ ಹಕ್ಕೂ ಇಲ್ಲದೆ ಭೂಮಿಯಲ್ಲಿ ಅಹಂಕಾರ ಪಡುತ್ತಿದ್ದರು. "ನಮಗಿಂತ ಶಕ್ತಿಶಾಲಿಗಳು ಯಾರಿದ್ದಾರೆ?" ಎನ್ನತೊಡಗಿದರು. ಅವರನ್ನು ಸೃಷ್ಟಿಸಿದ ಅಲ್ಲಾಹ್ ಅವರಿಗಿಂತ ಎಷ್ಟೋ ಅಧಿಕ ಶಕ್ತಿಶಾಲಿಯೆಂದು ಅವರಿಗೆ ಹೊಳೆಯಲಿಲ್ಲವೇ? ಅವರು ನಮ್ಮ ಸೂಕ್ತಗಳನ್ನು ನಿರಾಕರಿಸುತ್ತಲೇ ಇದ್ದರು.

فَأَمَّا عَادٌ فَاسْتَكْبَرُوا فِي الْأَرْضِ بِغَيْرِ الْحَقِّ وَقَالُوا مَنْ أَشَدُّ مِنَّا قُوَّةً ؕ أَوَلَمْ يَرَوْا أَنَّ اللّٰهَ الَّذِي خَلَقَهُمْ هُوَ أَشَدُّ مِنْهُمْ قُوَّةً ؕ وَكَانُوا بِاٰيٰتِنَا يَجْحَدُونَ ﴿١٥﴾

16. ಕೊನೆಗೆ ನಾವು ಅವರಿಗೆ ಲೌಕಿಕ ಜೀವನದಲ್ಲೇ ಅಪಮಾನಕರ ಯಾತನೆಯ ಸವಿಯನ್ನು ಉಣಿಸಲಿಕ್ಕಾಗಿ ಕೆಲವು ಅಶುಭ ದಿನಗಳಲ್ಲಿ ಅವರ ಮೇಲೆ ತೀವ್ರವಾದ ಚಂಡಮಾರುತವನ್ನು ಕಳುಹಿಸಿಬಿಟ್ಟೆವು. ಪರಲೋಕದ ಯಾತನೆಯಂತು ಇದಕ್ಕಿಂತಲೂ ಹೆಚ್ಚು ಅಪಮಾನಕರವಾಗಿದೆ. ಅಲ್ಲಿ ಅವರಿಗೆ ಸಹಾಯ ಮಾಡುವವರು ಯಾರೂ ಇರಲಾರರು.

فَأَرْسَلْنَا عَلَيْهِمْ رِيحًا صَرْصَرًا فِيٓ أَيَّامٍ نَّحِسَاتٍ لِّنُذِيقَهُمْ عَذَابَ الْخِزْيِ فِي الْحَيٰوةِ الدُّنْيَا ؕ وَلَعَذَابُ الْاٰخِرَةِ أَخْزٰى وَهُمْ لَا يُنصَرُونَ ﴿١٦﴾

17. ಇನ್ನು ಸಮೂದರು, ನಾವು ನೇರ ಮಾರ್ಗವನ್ನು ಅವರ ಮುಂದಿರಿಸಿದೆವು. ಆದರೆ ಅವರು ದಾರಿಗಾಣುವ ಬದಲು ಕುರುಡರಾಗಿರುವುದನ್ನೇ ಮೆಚ್ಚಿಕೊಂಡರು. ಕೊನೆಗೆ ಅವರ ದುಷ್ಕರ್ಮಗಳಿಂದಾಗಿ ಅವರ ಮೇಲೆ ಅಪಮಾನಕಾರಕ ಯಾತನೆ ಎರಗಿತು.

وَأَمَّا ثَمُودُ فَهَدَيْنٰهُمْ فَاسْتَحَبُّوا الْعَمٰى عَلَى الْهُدٰى فَأَخَذَتْهُمْ صٰعِقَةُ الْعَذَابِ الْهُونِ بِمَا كَانُوا يَكْسِبُونَ ﴿١٧﴾

18. ಮತ್ತು ಸತ್ಯವಿಶ್ವಾಸವನ್ನು ಸ್ವೀಕರಿಸಿ ಕರ್ಮಭ್ರಷ್ಟತೆಯಿಂದ ದೂರವಿರುತ್ತಿದ್ದವರನ್ನು ನಾವು ರಕ್ಷಿಸಿಕೊಂಡೆವು.

وَنَجَّيْنَا الَّذِينَ آمَنُوا وَكَانُوا يَتَّقُونَ ﴿١٨﴾

19. ಅಲ್ಲಾಹನ ಈ ಶತ್ರುಗಳು ನರಕಾಗ್ನಿಯ ಕಡೆಗೆ ಸುತ್ತುಗಟ್ಟಿ ತರಲ್ಪಡುವಂತಹ ದಿನದ ಬಗ್ಗೆ ಯೋಚಿಸಿರಿ.[3] ಅಂದು, ಅವರ ಹಿಂದಿನ ಕಾಲದವರನ್ನು ಮುಂದಿನ ಕಾಲದವರು ಬರುವವರೆಗೆ ತಡೆದಿರಿಸಲಾಗುವುದು.[4]

وَيَوْمَ يُحْشَرُ أَعْدَاءُ اللَّهِ إِلَى النَّارِ فَهُمْ يُوزَعُونَ ﴿١٩﴾

20. ಅವರೆಲ್ಲರೂ ಅಲ್ಲಿಗೆ ತಲಪಿದಾಗ ಅವರ ಕಿವಿಗಳೂ ಕಣ್ಣುಗಳೂ ಅವರ ದೇಹದ ಚರ್ಮಗಳೂ ಅವರು ಭೂಲೋಕದಲ್ಲಿ ಏನು ಮಾಡುತ್ತಿದ್ದರೆಂಬ ಕುರಿತು ಸಾಕ್ಷಿ ಹೇಳುವುವು.

حَتَّىٰ إِذَا مَا جَاءُوهَا شَهِدَ عَلَيْهِمْ سَمْعُهُمْ وَأَبْصَارُهُمْ وَجُلُودُهُم بِمَا كَانُوا يَعْمَلُونَ ﴿٢٠﴾

21. ಅವರು ತಮ್ಮ ಚರ್ಮಗಳೊಡನೆ- ನೀವು ನಮ್ಮ ವಿರುದ್ಧ ಸಾಕ್ಷಿ ಹೇಳಿದುದೇಕೆಂದು ಕೇಳುವರು. ಆಗ ಅವುಗಳು ಹೇಳುವವು: "ಸಕಲ ವಸ್ತುಗಳಿಗೆ ವಾಕ್ಸಾಮರ್ಥ್ಯ ನೀಡಿರುವ ದೇವನೇ ನಮಗೂ ವಾಕ್ಸಾಮರ್ಥ್ಯವನ್ನು ನೀಡಿರುವನು. ಅವನೇ ನಿಮ್ಮನ್ನು ಪ್ರಥಮ ಬಾರಿ ಸೃಷ್ಟಿಸಿದ್ದನು ಮತ್ತು ಈಗ ಅವನ ಕಡೆಗೇ ನೀವು ಮರಳಿ ತರಲ್ಪಡುತ್ತಿರುವಿರಿ.

وَقَالُوا لِجُلُودِهِمْ لِمَ شَهِدتُّمْ عَلَيْنَا ۖ قَالُوا أَنطَقَنَا اللَّهُ الَّذِي أَنطَقَ كُلَّ شَيْءٍ وَهُوَ خَلَقَكُمْ أَوَّلَ مَرَّةٍ وَإِلَيْهِ تُرْجَعُونَ ﴿٢١﴾

22. ನೀವು ಭೂಲೋಕದಲ್ಲಿ ಅಡಗಿಕೊಂಡು ಅಪರಾಧಗಳನ್ನೆಸಗುತ್ತಿದ್ದಾಗ ನಿಮ್ಮ ಕಿವಿಗಳು, ಕಣ್ಣುಗಳು ಮತ್ತು ಚರ್ಮಗಳು ನಿಮ್ಮ ವಿರುದ್ಧ ಸಾಕ್ಷಿ ಹೇಳಲಿವೆ ಎಂಬ ಯೋಚನೆಯೇ ನಿಮಗಿರಲಿಲ್ಲ. ನೀವಂತು ನಿಮ್ಮ ಹಲವಾರು ಕರ್ಮಗಳ ಬಗ್ಗೆ ಅಲ್ಲಾಹನಿಗೂ ಅರಿವಿಲ್ಲ ಎಂದು ಭಾವಿಸಿಕೊಂಡಿದ್ದಿರಿ.

وَمَا كُنتُمْ تَسْتَتِرُونَ أَن يَشْهَدَ عَلَيْكُمْ سَمْعُكُمْ وَلَا أَبْصَارُكُمْ وَلَا جُلُودُكُمْ وَلَٰكِن ظَنَنتُمْ أَنَّ اللَّهَ لَا يَعْلَمُ كَثِيرًا مِّمَّا تَعْمَلُونَ ﴿٢٢﴾

23. ನೀವು ನಿಮ್ಮ ಪ್ರಭುವಿನ ಬಗ್ಗೆ ಇರಿಸಿಕೊಂಡಿದ್ದ ಈ ಭಾವನೆಯೇ ನಿಮ್ಮನ್ನು ಕೆಡಿಸಿಬಿಟ್ಟಿತು ಮತ್ತು ಇದರಿಂದಾಗಿಯೇ ನೀವು ನಷ್ಟಕ್ಕೊಳಗಾಗಿಬಿಟ್ಟಿರಿ."

وَذَٰلِكُمْ ظَنُّكُمُ الَّذِي ظَنَنتُم بِرَبِّكُمْ أَرْدَاكُمْ فَأَصْبَحْتُم مِّنَ الْخَاسِرِينَ ﴿٢٣﴾

---

3. ಅಲ್ಲಾಹನ ಆಸ್ಥಾನದಲ್ಲಿ ಹಾಜರುಪಡಿಸಲು ಅವರನ್ನು ಕಲೆಹಾಕಲಾದಾಗ ಎಂದು ಹೇಳುವುದು ಇದರ ಇಂಗಿತವಾಗಿದೆ. ಆದರೆ ನರಕದೆಡೆಗೆ ಹೋಗಲು ಅವರನ್ನು ಕಲೆಹಾಕಲಾದಾಗ ಎಂಬ ಪದಗಳನ್ನು ಇಲ್ಲಿ ಪ್ರಯೋಗಿಸಲಾಗಿದೆ. ಏಕೆಂದರೆ ನರಕಪ್ರವೇಶ ಮಾಡುವುದೇ ಅವರ ಅಂತಿಮ ಗತಿಯಾಗಿದೆ.

4. ಒಂದೊಂದು ಜನಾಂಗ ಮತ್ತು ಒಂದೊಂದು ವಂಶವನ್ನು ಗಣನೆಗೆ ತೆಗೆದುಕೊಂಡು ಒಂದರ ನಂತರ ಒಂದರಂತೆ ಅದರ ತೀರ್ಮಾನ ಮಾಡಲಾಗುವುದಿಲ್ಲ. ಬದಲಾಗಿ ಹಿಂದಿನ ಮತ್ತು ಮುಂದಿನ ಜನಾಂಗಗಳನ್ನೆಲ್ಲಾ ಏಕಕಾಲಕ್ಕೆ ಒಟ್ಟು ಸೇರಿಸಿ ಒಂದೇ ಬಾರಿಗೆ ಅವುಗಳ ವಿಚಾರಣೆ ನಡೆಸಲಾಗುವುದು. ಏಕೆಂದರೆ ಪ್ರತಿಯೊಂದು ಜನಾಂಗವು ಉತ್ತಮವಾಗುವ ಅಥವಾ ಕೆಟ್ಟದ್ದಾಗುವ ಪ್ರಕ್ರಿಯೆಯಲ್ಲಿ ಮೊದಲು ಗತಿಸಿದ ಜನಾಂಗದ ಧಾರ್ಮಿಕ ಮತ್ತು ನೈತಿಕ ಬಳುವಳಿಯ ಪಾಲೂ ಇದೆ.

24. ಇಂತಹ ಸ್ಥಿತಿಯಲ್ಲಿ ಅವರು ತಾಳ್ಮೆ ವಹಿಸಿದರೂ (ವಹಿಸದಿದ್ದರೂ) ನರಕಾಗ್ನಿಯೇ ಅವರ ವಾಸಸ್ಥಾನವಾಗುವುದು. ಅವರು ಮರಳಲು ಬಯಸಿದರೂ ಅವರಿಗೆ ಅದಕ್ಕೆ ಅವಕಾಶ ಕೊಡಲಾಗದು.

فَإِن يَصْبِرُوا فَالنَّارُ مَثْوًى لَّهُمْ ۖ
وَإِن يَسْتَعْتِبُوا فَمَا هُم مِّنَ الْمُعْتَبِينَ ﴿٢٤﴾

25. ಅವರಿಗೆ ಅವರ ಮುಂದೆ ಮತ್ತು ಹಿಂದೆ ಇರುವ ವಸ್ತುಗಳನ್ನೆಲ್ಲ ಮನೋಹರಗೊಳಿಸಿ ತೋರಿಸುತ್ತಿದ್ದಂತಹ ಸಂಗಾತಿಗಳನ್ನು ನಾವು ಅವರ ಮೇಲೆ ಹೇರಿ ಬಿಟ್ಟಿದ್ದೆವು. ಕೊನೆಗೆ ಇವರಿಗಿಂತ ಮುಂಚೆ ಗತಿಸಿಹೋಗಿದ್ದ ಯಕ್ಷ ಮತ್ತು ಮಾನವ ಸಮುದಾಯಗಳಿಗೆ ಅನ್ವಯಗೊಂಡಿದ್ದ ಶಿಕ್ಷೆಯ ತೀರ್ಮಾನವೇ ಅವರಿಗೂ ಅನ್ವಯ ವಾಗಿ ಬಿಟ್ಟಿತು. ಖಂಡಿತವಾಗಿಯೂ ಅವರು ನಷ್ಟ ಹೊಂದು ವವರಾಗಿದ್ದರು.

وَقَيَّضْنَا لَهُمْ قُرَنَاءَ فَزَيَّنُوا لَهُم مَّا
بَيْنَ أَيْدِيهِمْ وَمَا خَلْفَهُمْ وَحَقَّ
عَلَيْهِمُ الْقَوْلُ فِي أُمَمٍ قَدْ خَلَتْ
مِن قَبْلِهِم مِّنَ الْجِنِّ وَالْإِنسِ ۖ
إِنَّهُمْ كَانُوا خَاسِرِينَ ﴿٢٥﴾ ٣ ع ٧ ١٧

26. "ಈ ಕುರ್‌ಆನನ್ನು ಎಷ್ಟು ಮಾತ್ರಕ್ಕೂ ಆಲಿಸಬೇಡಿರಿ. ಇದನ್ನು ಕೇಳಿಸಲಾದಾಗ ಆತಂಕಗಳನ್ನೊಡ್ಡಿರಿ. ಈ ಮೂಲಕ ನೀವು ವಿಜಯಿಗಳಾಗಲೂಬಹುದು" ಎಂದು ಈ ಸತ್ಯನಿಷೇಧಿಗಳು ಹೇಳುತ್ತಾರೆ.

وَقَالَ الَّذِينَ كَفَرُوا لَا تَسْمَعُوا لِهَٰذَا
الْقُرْآنِ وَالْغَوْا فِيهِ لَعَلَّكُمْ تَغْلِبُونَ ﴿٢٦﴾

27. ನಾವು ಸತ್ಯನಿಷೇಧಿಗಳಿಗೆ ಘೋರ ಯಾತನೆಯ ಸವಿಯನ್ನು ಉಣಿಸಿಯೇ ತೀರುವೆವು. ಇವರು ಮಾಡುತ್ತಿದ್ದ ಅತ್ಯಂತ ಕೆಟ್ಟ ಕೃತ್ಯಗಳ ಪ್ರತಿಫಲವನ್ನು ಇವರಿಗೆ ಸಂಪೂರ್ಣವಾಗಿ ಕೊಡುವೆವು.

فَلَنُذِيقَنَّ الَّذِينَ كَفَرُوا عَذَابًا شَدِيدًا
وَلَنَجْزِيَنَّهُمْ أَسْوَأَ الَّذِي كَانُوا يَعْمَلُونَ ﴿٢٧﴾

28. ಪ್ರತಿಫಲವಾಗಿ ಅಲ್ಲಾಹನ ಶತ್ರುಗಳಿಗೆ ಸಿಗಲಿರುವುದು ನರಕಾಗ್ನಿ ಯಾಗಿದೆ. ಇವರ ನೆಲೆಯು ಶಾಶ್ವತವಾಗಿ ಅದರಲ್ಲೇ ಇರುವುದು. ಅವರು ನಮ್ಮ ವಚನಗಳನ್ನು ತಿರಸ್ಕರಿಸುತ್ತಿದ್ದ ಅಪರಾಧಕ್ಕೆ ಶಿಕ್ಷೆಯಿದು.

ذَٰلِكَ جَزَاءُ أَعْدَاءِ اللَّهِ النَّارُ ۖ لَهُمْ
فِيهَا دَارُ الْخُلْدِ ۖ جَزَاءً بِمَا كَانُوا
بِآيَاتِنَا يَجْحَدُونَ ﴿٢٨﴾

29. ಅಲ್ಲಿ ಈ ಸತ್ಯನಿಷೇಧಿಗಳು, "ನಮ್ಮ ಪ್ರಭೂ, ನಮ್ಮನ್ನು ಪಥ ಭ್ರಷ್ಟಗೊಳಿಸಿದ್ದ ಯಕ್ಷ ಮತ್ತು ಮಾನವರನ್ನು ನಮಗೊಮ್ಮೆ ತೋರಿಸಿಬಿಡು. ಅವರು ಚೆನ್ನಾಗಿ ಅಪಮಾನಿತರಾಗುವಂತೆ ನಾವು ಅವರನ್ನು ತುಳಿದು ಬಿಡುವೆವು" ಎಂದು ಹೇಳುವರು.

وَقَالَ الَّذِينَ كَفَرُوا رَبَّنَا أَرِنَا الَّذَيْنِ
أَضَلَّانَا مِنَ الْجِنِّ وَالْإِنسِ نَجْعَلْهُمَا
تَحْتَ أَقْدَامِنَا لِيَكُونَا مِنَ الْأَسْفَلِينَ ﴿٢٩﴾

30. ನಮ್ಮ ಪ್ರಭು ಅಲ್ಲಾಹನು ಎಂದು ಹೇಳಿ ಆ ಬಳಿಕ ಅದರಲ್ಲೇ ಸ್ಥಿರವಾಗಿ ನಿಂತು ಬಿಟ್ಟವರ ಮೇಲೆ[5] ಖಂಡಿತವಾಗಿಯೂ

إِنَّ الَّذِينَ قَالُوا رَبُّنَا اللَّهُ ثُمَّ اسْتَقَامُوا
تَتَنَزَّلُ عَلَيْهِمُ الْمَلَائِكَةُ أَلَّا تَخَافُوا

5. ಅರ್ಥಾತ್- ಆಕಸ್ಮಿಕವಾಗಿ ಅಲ್ಲಾಹನನ್ನು ತಮ್ಮ ಪ್ರಭುವೆಂದು ಹೇಳಿಬಿಟ್ಟಿಲ್ಲ. ಹಾಗೆಯೇ ಅಲ್ಲಾಹನನ್ನು ಪ್ರಭುವೆಂದು ಹೇಳುತ್ತಲೇ ಇತರರನ್ನೂ ತಮ್ಮ ಪ್ರಭುವನ್ನಾಗಿ ಮಾಡುವ ತಪ್ಪನ್ನೆಸಗಲಿಲ್ಲ. ಬದಲಾಗಿ ಈ ವಿಶ್ವಾಸವನ್ನು ಒಮ್ಮೆ ಸ್ವೀಕರಿಸಿದ ನಂತರ ಜೀವನ ಪರ್ಯಂತ

ದೇವಚರರು ಇಳಿಯುತ್ತಾರೆ ಮತ್ತು ಹೇಳುತ್ತಾರೆ; "ಹೆದರ ಬೇಡಿರಿ, ಖೇದಿಸಬೇಡಿರಿ ನಿಮಗೆ ವಾಗ್ದಾನ ಮಾಡಲಾಗಿರುವ ಸ್ವರ್ಗದ ಸುವಾರ್ತೆಯಿಂದ ಸಂತಸಗೊಳ್ಳಿರಿ.

وَلَا تَحْزَنُوا وَأَبْشِرُوا بِالْجَنَّةِ الَّتِي
كُنْتُمْ تُوعَدُونَ ﴿٣٠﴾

31. ನಾವು ಈ ಲೋಕದ ಜೀವನದಲ್ಲೂ ಪರಲೋಕದಲ್ಲೂ ನಿಮ್ಮ ಸಂಗಾತಿಗಳಾಗಿದ್ದೇವೆ. ಅಲ್ಲಿ ನೀವು ಬಯಸಿದ್ದೆಲ್ಲವೂ ನಿಮಗೆ ಸಿಗುವುದು. ನೀವು ಆಶಿಸಿದ ಪ್ರತಿಯೊಂದು ವಸ್ತುವೂ ನಿಮ್ಮದಾಗುವುದು.

نَحْنُ أَوْلِيَاؤُكُمْ فِي الْحَيَاةِ الدُّنْيَا وَ
فِي الْآخِرَةِ ۖ وَلَكُمْ فِيهَا مَا تَشْتَهِي أَنْفُسُكُمْ
وَلَكُمْ فِيهَا مَا تَدَّعُونَ ﴿٣١﴾

32. ಮಹಾ ಕ್ಷಮಾಶೀಲನೂ ಕರುಣಾನಿಧಿಯೂ ಆಗಿರುವವನ ಕಡೆಯಿಂದ ನಿಮಗಿರುವ ಆತಿಥ್ಯವಿದು."

نُزُلًا مِنْ غَفُورٍ رَحِيمٍ ﴿٣٢﴾ ع ١٨

33. ಅಲ್ಲಾಹನ ಕಡೆಗೆ ಆಹ್ವಾನಿಸಿದ, ಸತ್ಕರ್ಮವೆಸಗಿದ ಮತ್ತು 'ನಾನು ಮುಸ್ಲಿಮ್' ಎಂದು ಹೇಳುತ್ತಿದ್ದ ವ್ಯಕ್ತಿಯ ಮಾತಿಗಿಂತ ಶ್ರೇಷ್ಠವಾದ ಮಾತು ಇನ್ನಾರದಾಗಿರಲು ಸಾಧ್ಯ!

وَمَنْ أَحْسَنُ قَوْلًا مِمَّنْ دَعَا إِلَى
اللَّهِ وَعَمِلَ صَالِحًا وَقَالَ إِنَّنِي مِنَ
الْمُسْلِمِينَ ﴿٣٣﴾

34. ಸಂದೇಶವಾಹಕರೇ, ಒಳಿತು ಮತ್ತು ಕೆಡುಕು ಸರಿಸಮಾನವಲ್ಲ. ನೀವು ಕೆಡುಕನ್ನು ಅತ್ಯುತ್ತಮ ಒಳಿತಿನ ಮೂಲಕ ದೂರೀಕರಿಸಿರಿ. ನಿಮ್ಮೊಂದಿಗೆ ಹಗೆತನ ಕಟ್ಟಿಕೊಂಡವನು ನಿಮ್ಮ ಆಪ್ತ ಮಿತ್ರನಾಗಿ ಬಿಡುವುದನ್ನು ನೀವು ಕಾಣುವಿರಿ.

وَلَا تَسْتَوِي الْحَسَنَةُ وَلَا السَّيِّئَةُ ۚ
ادْفَعْ بِالَّتِي هِيَ أَحْسَنُ فَإِذَا الَّذِي
بَيْنَكَ وَبَيْنَهُ عَدَاوَةٌ كَأَنَّهُ وَلِيٌّ حَمِيمٌ ﴿٣٤﴾

35. ಈ ಗುಣವಿಶೇಷವು ಸಹನಶೀಲರಿಗಲ್ಲದೆ ಇನ್ನಾರಿಗೂ ಲಭ್ಯವಾಗುವುದಿಲ್ಲ. ಈ ಸ್ಥಾನವು ಮಹಾ ಅದೃಷ್ಟಶಾಲಿಗಳ ಹೊರತು ಮತ್ತಾರಿಗೂ ಪ್ರಾಪ್ತವಾಗುವುದಿಲ್ಲ.

وَمَا يُلَقَّاهَا إِلَّا الَّذِينَ صَبَرُوا ۚ وَمَا
يُلَقَّاهَا إِلَّا ذُو حَظٍّ عَظِيمٍ ﴿٣٥﴾

36. ನಿಮಗೆ ಶೈತಾನನ ಕಡೆಯಿಂದೇನಾದರೂ ಪ್ರಚೋದನೆಯುಂಟಾದರೆ ನೀವು ಅಲ್ಲಾಹನ ಅಭಯವನ್ನು ಯಾಚಿಸಿರಿ.[6] ನಿಶ್ಚಯವಾಗಿಯೂ ಅವನು ಸಕಲವನ್ನೂ ಆಲಿಸುತ್ತಾನೆ ಮತ್ತು ಸಕಲವನ್ನೂ ಅರಿತಿದ್ದಾನೆ.

وَإِمَّا يَنْزَغَنَّكَ مِنَ الشَّيْطَانِ نَزْغٌ
فَاسْتَعِذْ بِاللَّهِ ۖ إِنَّهُ هُوَ السَّمِيعُ الْعَلِيمُ ﴿٣٦﴾

ಅದರಲ್ಲಿ ನೆಲೆ ನಿಂತರು. ಅದಕ್ಕೆ ವಿರುದ್ಧವಾದ ಯಾವುದೇ ಇತರ ವಿಶ್ವಾಸವನ್ನು ಅಂಗೀಕರಿಸಿ ಕೊಳ್ಳಲಿಲ್ಲ. ಹಾಗೆಯೇ ಆ ವಿಶ್ವಾಸವನ್ನು ಮಿಥ್ಯವಿಶ್ವಾಸಗಳಿಂದ ಕಲಸುಮೇಲೋಗರಗೊಳಿಸಲಿಲ್ಲ. ಮಾತ್ರವಲ್ಲ ತಮ್ಮ ವ್ಯಾವಹಾರಿಕ ಜೀವನದಲ್ಲೂ ಏಕದೇವ ವಿಶ್ವಾಸದ ಬೇಡಿಕೆಗಳನ್ನು ನಿರಂತರ ಈಡೇರಿಸುತ್ತಿದ್ದರು.

6. ಪಿಶಾಚಿಯ ಪ್ರಲೋಭನೆ ಎಂದರೆ ಸಿಟ್ಟು ಬರಿಸುವುದಾಗಿದೆ. ಬಯ್ಯುವ ಮತ್ತು ಆರೋಪ ಹೊರಿಸುವ ವಿರೋಧಿಗಳ ಬಗ್ಗೆ ಮನಸ್ಸಿನಲ್ಲಿ ಸಿಟ್ಟು ಹುಟ್ಟಿಕೊಳ್ಳುತ್ತಿದ್ದು ಸೂಕ್ತವಾದ ಪ್ರತ್ಯುತ್ತರ ನೀಡಬೇಕೆಂದು ಅನಿಸುತ್ತಿದ್ದರೆ ಕೂಡಲೇ ನೀವು ಅದು ಪಿಶಾಚಿಯ ಪ್ರಲೋಭನೆಯಾಗಿದೆ, ನಿಮ್ಮನ್ನು ಅದು ಅಸಭ್ಯರಾದ ವಿರೋಧಿಗಳ ಮಟ್ಟಕ್ಕೆ ಇಳಿಸಬಯಸುತ್ತಿದೆ ಎಂದು ತಿಳಿದುಕೊಳ್ಳಬೇಕು.

37. ಈ ಇರುಳೂ ಹಗಲೂ ಸೂರ್ಯ-ಚಂದ್ರರೂ ಅಲ್ಲಾಹನ ನಿದರ್ಶನಗಳಲ್ಲಾಗಿವೆ. ಸೂರ್ಯ-ಚಂದ್ರರಿಗೆ ಸಾಷ್ಟಾಂಗವೆರಗ ಬೇಡಿರಿ; ಅವುಗಳನ್ನು ಸೃಷ್ಟಿಸಿದ ಅಲ್ಲಾಹನಿಗೆ ಸಾಷ್ಟಾಂಗವೆರಗಿರಿ. ನೀವು ನಿಜಕ್ಕೂ ಅವನನ್ನೇ ಆರಾಧಿಸುವವರಾಗಿದ್ದರೆ (ಹೀಗೆ ಮಾಡಿರಿ).

وَمِنْ اٰيٰتِهِ الَّيْلُ وَالنَّهَارُ وَالشَّمْسُ وَالْقَمَرُ ؕ لَا تَسْجُدُوْا لِلشَّمْسِ وَلَا لِلْقَمَرِ وَاسْجُدُوْا لِلّٰهِ الَّذِيْ خَلَقَهُنَّ اِنْ كُنْتُمْ اِيَّاهُ تَعْبُدُوْنَ ۝٣٧

38. ಇವರು ದುರಹಂಕಾರದಿಂದ ತಮ್ಮ ಮಾತಿನಲ್ಲೇ ಪಟ್ಟು ಹಿಡಿದು ನಿಂತುಕೊಳ್ಳುವವರೆಂದಾದರೆ ಏನೂ ಚಿಂತಿಲ್ಲ. ನಿಮ್ಮ ಪ್ರಭುವಿಗೆ ನಿಕಟವಾಗಿರುವ ದೇವಚರರು ಅಹೋರಾತ್ರಿ ಅವನನ್ನು ಸ್ತುತಿಸುತ್ತಿದ್ದಾರೆ ಮತ್ತು ಅವರು ಎಂದಿಗೂ ಬಳಲುವುದಿಲ್ಲ.

فَاِنِ اسْتَكْبَرُوْا فَالَّذِيْنَ عِنْدَ رَبِّكَ يُسَبِّحُوْنَ لَهٗ بِالَّيْلِ وَالنَّهَارِ وَهُمْ لَا يَسْـَٔمُوْنَ ۩ ۝٣٨

السجدة

39. ಇದು ಅಲ್ಲಾಹನ ನಿದರ್ಶನಗಳಲ್ಲೊಂದು, ಭೂಮಿಯು ಬರಡಾಗಿ ಬಿದ್ದಿರುವುದನ್ನು ನೀವು ಕಾಣುತ್ತೀರಿ, ಆ ಬಳಿಕ ನಾವು ಅದರ ಮೇಲೆ ನೀರನ್ನು ಸುರಿದ ತಕ್ಷಣ ಅದು ಹಿಗ್ಗುತ್ತದೆ ಮತ್ತು ಅರಳಿಕೊಳ್ಳುತ್ತದೆ. ಖಂಡಿತವಾಗಿಯೂ, ಯಾವ ದೇವನು ಈ ಸತ್ತು ಹೋಗಿದ್ದ ಭೂಮಿಯನ್ನು ಜೀವಂತಗೊಳಿಸುತ್ತಾನೋ ಅವನೇ ಮೃತರನ್ನೂ ಪುನಃ ಜೀವಂತ ಗೊಳಿಸಲಿರುವನು. ನಿಶ್ಚಯವಾಗಿಯೂ ಅವನು ಎಲ್ಲ ಕಾರ್ಯಗಳ ಸಾಮರ್ಥ್ಯವುಳ್ಳವನು.

وَمِنْ اٰيٰتِهٖۤ اَنَّكَ تَرَى الْاَرْضَ خَاشِعَةً فَاِذَاۤ اَنْزَلْنَا عَلَيْهَا الْمَآءَ اهْتَزَّتْ وَرَبَتْ ؕ اِنَّ الَّذِيْۤ اَحْيَاهَا لَمُحْيِ الْمَوْتٰى ؕ اِنَّهٗ عَلٰى كُلِّ شَيْءٍ قَدِيْرٌ ۝٣٩

40. ನಮ್ಮ ವಚನಗಳಿಗೆ ಅಪಾರ್ಥಗಳನ್ನು ಕಟ್ಟುವವರು ನಮ್ಮಿಂದೇನೂ ಮರೆಯಾಗಿಲ್ಲ. ನರಕಾಗ್ನಿಗೆ ತಳ್ಳಲ್ಪಡುವವನು ಉತ್ತಮನೋ ಅಥವಾ ಪುನರುತ್ಥಾನ ದಿನ ಪ್ರಶಾಂತ ಸ್ಥಿತಿಯಲ್ಲಿ ಹಾಜರಾಗುವವನು ಉತ್ತಮನೋ ಎಂದು ನೀವೇ ಯೋಚಿಸಿಕೊಳ್ಳಿರಿ. ನಿಮಗೆ ಇಷ್ಟವಿರುವುದನ್ನು ಮಾಡುತ್ತಲಿರಿ. ನಿಮ್ಮ ಎಲ್ಲ ಚಟುವಟಿಕೆಗಳನ್ನೂ ಅಲ್ಲಾಹನು ವೀಕ್ಷಿಸುತ್ತಿದ್ದಾನೆ.

اِنَّ الَّذِيْنَ يُلْحِدُوْنَ فِيْۤ اٰيٰتِنَا لَا يَخْفَوْنَ عَلَيْنَا ؕ اَفَمَنْ يُّلْقٰى فِي النَّارِ خَيْرٌ اَمْ مَّنْ يَّاْتِيْۤ اٰمِنًا يَّوْمَ الْقِيٰمَةِ ؕ اِعْمَلُوْا مَا شِئْتُمْ ۙ اِنَّهٗ بِمَا تَعْمَلُوْنَ بَصِيْرٌ ۝٤٠

41. ಇವರು, ಬೋಧನೆಯು ತಮ್ಮ ಮುಂದೆ ಬಂದಾಗ ಅದನ್ನು ತಿರಸ್ಕರಿಸಿದವರಾಗಿದ್ದಾರೆ. ಆದರೆ ಇದೊಂದು ಪ್ರತಾಪವುಳ್ಳ ಗ್ರಂಥವೆಂಬುದೇ ವಾಸ್ತವಿಕತೆ.

اِنَّ الَّذِيْنَ كَفَرُوْا بِالذِّكْرِ لَمَّا جَآءَهُمْ ۚ وَاِنَّهٗ لَكِتٰبٌ عَزِيْزٌ ۝٤١

42. ಮಿಥ್ಯವು ಇದರ ಮುಂದಿನಿಂದಾಗಲಿ, ಹಿಂದಿನಿಂದಾಗಲಿ ಇದರೊಳಗೆ ಬರಲಾರದು.[7] ಇದು ಯುಕ್ತಿಪೂರ್ಣನೂ ಪ್ರಶಂಸಾರ್ಹನೂ ಆದವನಿಂದ ಅವತೀರ್ಣಗೊಂಡುದಾಗಿದೆ.

لَّا يَاْتِيْهِ الْبَاطِلُ مِنْۢ بَيْنِ يَدَيْهِ وَلَا مِنْ خَلْفِهٖ ؕ تَنْزِيْلٌ مِّنْ حَكِيْمٍ حَمِيْدٍ ۝٤٢

---

7. 'ಮುಂದಿನಿಂದ ಬರಲಾರದು' ಎಂದರೆ ಪವಿತ್ರ ಕುರ್‌ಆನಿನ ಮೇಲೆ ನೇರವಾದ ಆಕ್ರಮಣ ನಡೆಸಿ ಅದರ ಮಾತನ್ನು ತಪ್ಪೆಂದು ಮತ್ತು

43. ಸಂದೇಶವಾಹಕರೇ, ನಿಮಗಿಂತ ಮುಂಚೆ ಗತಿಸಿದ ಸಂದೇಶವಾಹಕ ರೊಡನೆ ಹೇಳದಿದ್ದಂತಹ ವಿಷಯವನ್ನೇನೂ ನಿಮಗೆ ಹೇಳಲಾಗು ತ್ತಿಲ್ಲ. ನಿಸ್ಸಂದೇಹವಾಗಿಯೂ ನಿಮ್ಮ ಪ್ರಭು ಮಹಾ ಕ್ಷಮಾಶೀಲ ನಾಗಿದ್ದಾನೆ. ಅದರೊಂದಿಗೆ ವೇದನಾಜನಕ ಶಿಕ್ಷೆ ಕೊಡುವವನೂ ಆಗಿದ್ದಾನೆ.

مَا يُقَالُ لَكَ إِلَّا مَا قَدْ قِيلَ لِلرُّسُلِ
مِنْ قَبْلِكَ ۚ إِنَّ رَبَّكَ لَذُو مَغْفِرَةٍ
وَذُو عِقَابٍ أَلِيمٍ ﴿٤٣﴾

44. ನಾವು ಇದನ್ನು 'ಅರಬಿಯೇತರ' ಕುರ್‌ಆನನ್ನಾಗಿ ಮಾಡಿ ಕಳುಹಿಸುತ್ತಿದ್ದರೆ ಇವರು ಹೇಳುತ್ತಿದ್ದರು: "ಇದರ ಸೂಕ್ತಗಳನ್ನು ಸುಸ್ಪಷ್ಟವಾಗಿ ವಿವರಿಸಲಾಗಿಲ್ಲವೇಕೆ? ಸಂದೇಶವು ಅರಬೇತರ ಭಾಷೆಯದ್ದು ಮತ್ತು ಅಭಿಸಂಬೋಧಿತರು ಅರಬರು[8]- ಇದೆಂತಹ ವಿಪರ್ಯಾಸ!" ಇವರೊಡನೆ ಹೇಳಿರಿ, ಈ ಕುರ್‌ಆನ್ ಸತ್ಯವಿಶ್ವಾಸ ಸ್ವೀಕರಿಸುವವರ ಪಾಲಿಗಂತೂ ಮಾರ್ಗದರ್ಶನ ಮತ್ತು ದಿವ್ಯ ಔಷಧವಾಗಿದೆ. ಆದರೆ ಸತ್ಯನಿಷೇಧಿಗಳ ಪಾಲಿಗೆ ಇದು ಕಿವಿಯ ಗಂಟು ಮತ್ತು ಕಣ್ಣಿನ ಪಟ್ಟಿಯಾಗಿದೆ. ಅವರ ಅವಸ್ಥೆಯು ಅವರನ್ನು ದೂರದಿಂದ ಕರೆಯಲಾಗುತ್ತಿದೆಯೋ ಎಂಬಂತಿದೆ.

وَلَوْ جَعَلْنَاهُ قُرْآنًا أَعْجَمِيًّا لَقَالُوا
لَوْلَا فُصِّلَتْ آيَاتُهُ ۖ أَأَعْجَمِيٌّ وَعَرَبِيٌّ ۗ
قُلْ هُوَ لِلَّذِينَ آمَنُوا هُدًى وَشِفَاءٌ ۖ
وَالَّذِينَ لَا يُؤْمِنُونَ فِي آذَانِهِمْ
وَقْرٌ وَهُوَ عَلَيْهِمْ عَمًى ۚ أُولَٰئِكَ
يُنَادَوْنَ مِنْ مَكَانٍ بَعِيدٍ ﴿٤٤﴾

45. ಇದಕ್ಕಿಂತ ಮುಂಚೆ ನಾವು ಮೂಸಾರಿಗೆ ಗ್ರಂಥ ನೀಡಿದ್ದೆವು. ಅದರ ವಿಷಯದಲ್ಲೂ ಇದೇ ಭಿನ್ನಾಭಿಪ್ರಾಯವುಂಟಾಗಿತ್ತು. ನಿಮ್ಮ ಪ್ರಭು ಮೊದಲೇ ಒಂದು ವಿಷಯದ ನಿರ್ಧಾರ ಮಾಡದಿ ರುತ್ತಿದ್ದರೆ ಈ ಭಿನ್ನಾಭಿಪ್ರಾಯದವರ ನಡುವೆ ತೀರ್ಮಾನ ಮಾಡಿ

وَلَقَدْ آتَيْنَا مُوسَى الْكِتَابَ فَاخْتُلِفَ
فِيهِ ۗ وَلَوْلَا كَلِمَةٌ سَبَقَتْ مِنْ
رَبِّكَ لَقُضِيَ بَيْنَهُمْ ۚ وَإِنَّهُمْ لَفِي

ಅದರ ಬೋಧನೆಗಳನ್ನು ಮಿಥ್ಯವೆಂದು ಸಾಬೀತು ಪಡಿಸಲು ಯಾರಾದರೂ ಪ್ರಯತ್ನಿಸಿದರೆ ಅವನು ಅದರಲ್ಲಿ ಯಶಸ್ವಿಯಾಗಲಾರನು. 'ಹಿಂದಿನಿಂದ ಬರಲಾರದು' ಎಂದರೆ ಕುರ್‌ಆನ್ ಸಮರ್ಪಿಸಿದಂತಹ ವಾಸ್ತವಿಕತೆಗಳನ್ನು ವಿರೋಧಿಸುವಂತಹ ಯಾವುದೇ 'ಸತ್ಯ' ನಿರ್ಣಾಯಕದಿನದ ತನಕವೂ ಸಂಶೋಧಿಸಲ್ಪಡಲಾರದು. ಕುರ್‌ಆನ್ ವಿವರಿಸುವಂತಹ ಯಾವುದೇ 'ಜ್ಞಾನ'ವನ್ನು ನಿರಾಕರಿಸುವಂತಹ ಯಾವುದೇ ನೈಜ 'ಜ್ಞಾನ' ಆಗತವಾಗಲಾರದು. ವಿಶ್ವಾಸ, ಚಾರಿತ್ರ್ಯ, ಕಾನೂನು, ನಾಗರಿಕತೆ, ಸಂಸ್ಕೃತಿ, ಆರ್ಥಿಕತೆ, ಸಾಮಾಜಿಕ ಸಂಬಂಧ ಮತ್ತು ರಾಜಕೀಯ ವಿಷಯಗಳಲ್ಲಿ ಪವಿತ್ರ ಕುರ್‌ಆನ್ ಮಾನವನಿಗೆ ನೀಡಿರುವ ಮಾರ್ಗದರ್ಶನವನ್ನು ತಪ್ಪೆಂದು ಸಾಬೀತುಪಡಿಸುವಂತಹ ಯಾವುದೇ ಪ್ರಯೋಗ ಅಥವಾ ಸಂಶೋಧನೆ ಬೆಳಕಿಗೆ ಬರಲಾರದು.

8. ಇದು ಪ್ರವಾದಿವರ್ಯರ(ಸ) ವಿರುದ್ಧ ತೋರಲಾಗುತ್ತಿದ್ದ ಹಟಮಾರಿತನದ ಒಂದು ಮಾದರಿಯಾಗಿದೆ. ಮುಹಮ್ಮದ್(ಸ) ಅರಬರಾಗಿದ್ದಾರೆ. ಆದ್ದರಿಂದ ಅರಬಿ ಭಾಷೆಯಲ್ಲಿ ಕುರ್‌ಆನನ್ನು ಸಮರ್ಪಿಸಿದರೆ ಈ ವಾಣಿಯನ್ನು ಅವರು ಸ್ವತಃ ಹುಟ್ಟು ಹಾಕಿಲ್ಲ, ಬದಲಾಗಿ ದೇವನು ಅವರ ಮೇಲೆ ಅವತೀರ್ಣ ಗೊಳಿಸಿದ್ದಾನೆ ಎಂದು ಕಲ್ಪಿಸಲು ಹೇಗೆ ಸಾಧ್ಯ? ಫಾರ್ಸಿ, ರೋಮನ್ ಅಥವಾ ಗ್ರೀಕ್ ಭಾಷೆಯಲ್ಲಿ ಇದ್ದಕ್ಕಿದ್ದಂತೆ ಅವರು ನಿರರ್ಗಳ ಭಾಷಣ ಮಾಡತೊಡಗಿದರೆ ಈ ವಾಣಿ ದೇವನಿಂದ ಅವತೀರ್ಣಗೊಂಡ ವಾಣಿಯೆಂದು ಒಪ್ಪಬಹುದಾಗಿತ್ತು ಎಂದು ಸತ್ಯನಿಷೇಧಿಗಳು ಹೇಳುತ್ತಿದ್ದರು. ಅದಕ್ಕೆ ಅಲ್ಲಾಹನು ಹೀಗೆ ಉತ್ತರವೀಯುತ್ತಿದ್ದಾನೆ. ಇವರಿಗೆ ಅರ್ಥ ಮಾಡಿಕೊಳ್ಳಲು ಸಾಧ್ಯವಿರುವ ಇವರದೇ ಭಾಷೆಯಲ್ಲಿ ಕುರ್‌ಆನನ್ನು ಕಳುಹಿಸಲಾದರೆ ಅರಬನಾದ ಒಬ್ಬ ವ್ಯಕ್ತಿಯ ಮೂಲಕ ಅರಬಿಯಲ್ಲೇ ಯಾಕೆ ವಾಣಿಯನ್ನು ಅವತೀರ್ಣಗೊಳಿಸಲಾಗಿದೆ ಎಂದು ಇವರು ಆಕ್ಷೇಪ ವ್ಯಕ್ತಪಡಿಸುತ್ತಾರೆ. ಆದರೆ ಅದನ್ನು ಬೇರೆ ಭಾಷೆಯಲ್ಲಿ ಕಳುಹಿಸಲಾಗಿರುತ್ತಿದ್ದರೆ ಅವರು ಆಕ್ಷೇಪ ವ್ಯಕ್ತಪಡಿಸುತ್ತಾ ಹೇಳುತ್ತಿದ್ದರು, 'ಚೆನ್ನಾಗಿದೆ- ಅರಬ್ ಸಮುದಾಯಕ್ಕೆ ಅರಬರ ಪೈಕಿಯವರೇ ಆದ ಒಬ್ಬರನ್ನು ಪ್ರವಾದಿಯನ್ನಾಗಿ ಮಾಡಿ ಕಳುಹಿಸಲಾಯಿತು. ಆದರೆ ಅವರ ಮೇಲೆ ಸ್ವತಃ ಪ್ರವಾದಿಯಾಗಲಿ, ಸಮುದಾಯವಾಗಲಿ ತಿಳಿಯದಂತಹ ಭಾಷೆಯಲ್ಲಿ ವಾಣಿಯನ್ನು ಅವತೀರ್ಣ ಗೊಳಿಸಲಾಯಿತು.'

ಬಿಡಲಾಗುತ್ತಿತ್ತು. ವಾಸ್ತವದಲ್ಲಿ ಇವರು ಅದರ ವಿಷಯದಲ್ಲಿ ತೀವ್ರ ಕಳವಳದಾಯಕ ಸಂದೇಹದಲ್ಲಿ ಬಿದ್ದುಕೊಂಡಿದ್ದಾರೆ.

شَكٍّ مِّنْهُ مُرِيبٍ ﴿٤٥﴾

46. ಪುಣ್ಯ ಕಾರ್ಯಗಳನ್ನು ಮಾಡುವವನು ತನ್ನ ಹಿತಕ್ಕಾಗಿಯೇ ಮಾಡುವನು. ಪಾಪ ಮಾಡುವವನ ದುಷ್ಪರಿಣಾಮವು ಅವನನ್ನೇ ಬಾಧಿಸುವುದು. ನಿಮ್ಮ ಪ್ರಭು ತನ್ನ ದಾಸರ ಪಾಲಿಗೆ ಅಕ್ರಮಿಯಲ್ಲ.

مَنْ عَمِلَ صَالِحًا فَلِنَفْسِهِ وَمَنْ
أَسَاءَ فَعَلَيْهَا ۗ وَمَا رَبُّكَ بِظَلَّامٍ لِّلْعَبِيدِ ﴿٤٦﴾

47. *ಆ ಘಳಿಗೆಯ[9] ಜ್ಞಾನವು ಅಲ್ಲಾಹನ ಕಡೆಗೇ ಮರಳುತ್ತದೆ. ತಮ್ಮ ಮೊಗ್ಗುಗಳಿಂದ ಹೊರಬರುವ ಎಲ್ಲ ಫಲಗಳನ್ನು ಬಲ್ಲವನು ಅವನೇ. ಯಾವ ಹೆಣ್ಣು ಗರ್ಭ ಧರಿಸಿದೆಯೆಂದೂ ಯಾವುದು ಪ್ರಸವಿಸಿದೆಯೆಂದೂ ಅವನಿಗೆ ಮಾತ್ರ ಗೊತ್ತು. ನನ್ನ ಸಹಭಾಗಿಗಳು ಎಲ್ಲಿದ್ದಾರೆ? ಎಂದು ಅವನು ಇವರನ್ನು ಕೂಗಿ ಕೇಳುವಂದು ಇವರು, ಇಂದು ನಮ್ಮಲ್ಲಾರೂ ಇದರ ಸಾಕ್ಷಿ ಹೇಳುವವನಿಲ್ಲವೆಂಬುದನ್ನು ನಾವು ಆಗಲೇ ನಿವೇದಿಸಿದ್ದೇವೆಂದು ಹೇಳುವರು.

إِلَيْهِ يُرَدُّ عِلْمُ السَّاعَةِ ۚ وَمَا
تَخْرُجُ مِن ثَمَرَاتٍ مِّنْ أَكْمَامِهَا
وَمَا تَحْمِلُ مِنْ أُنثَىٰ وَلَا تَضَعُ
إِلَّا بِعِلْمِهِ ۚ وَيَوْمَ يُنَادِيهِمْ أَيْنَ
شُرَكَائِي قَالُوا آذَنَّاكَ مَا مِنَّا مِن شَهِيدٍ ﴿٤٧﴾

الجزء ٢٥

48. ಈ ಹಿಂದೆ ಇವರು ಪ್ರಾರ್ಥಿಸುತ್ತಿದ್ದ ಎಲ್ಲ ಆರಾಧ್ಯರೂ ಆಗ ಇವರಿಂದ ಕಳೆದು ಹೋಗುವರು. ತಮಗಿನ್ನೂ ಯಾವುದೇ ಅಭಯ ಸ್ಥಾನ ಇಲ್ಲವೆಂಬುದನ್ನು ಆಗ ಇವರು ತಿಳಿದು ಕೊಳ್ಳುವರು.

وَضَلَّ عَنْهُم مَّا كَانُوا يَدْعُونَ مِن
قَبْلُ ۖ وَظَنُّوا مَا لَهُم مِّن مَّحِيصٍ ﴿٤٨﴾

49. ಮಾನವನು ಒಳಿತಿಗಾಗಿ ಪ್ರಾರ್ಥಿಸಿ ದಣಿಯುವುದಿಲ್ಲ ಮತ್ತು ತನ್ನ ಮೇಲೆ ವಿಪತ್ತೇನಾದರೂ ಬಂದಾಗ ನಿರಾಶನೂ ಹತಾಶನೂ ಆಗಿ ಬಿಡುತ್ತಾನೆ.

لَّا يَسْأَمُ الْإِنسَانُ مِن دُعَاءِ الْخَيْرِ
وَإِن مَّسَّهُ الشَّرُّ فَيَئُوسٌ قَنُوطٌ ﴿٤٩﴾

50. ಆದರೆ ಕಷ್ಟಕಾಲ ಕಳೆದು ಹೋದ ಬಳಿಕ ನಾವು ಇವನಿಗೆ ನಮ್ಮ ಕೃಪೆಯ ಸವಿಯನ್ನುಣಿಸಿದಾಗ ಇವನು, "ನಾನು ಇದಕ್ಕೆ ಅರ್ಹನು. ಪುನರುತ್ಥಾನವು ಎಂದಾದರೂ ಬರಲಿಕ್ಕಿದೆಯೆಂದು ನಾನು ಭಾವಿಸುವುದಿಲ್ಲ. ಒಂದು ವೇಳೆ ನಾನು ನನ್ನ ಪ್ರಭುವಿನ ಕಡೆಗೆ ಮರಳಿಸಲ್ಪಟ್ಟರೂ ಅಲ್ಲೂ ನನಗೆ ಸುಖವೇ ಇರುವುದು" ಎನ್ನುತ್ತಾನೆ. ವಾಸ್ತವದಲ್ಲಿ ನಾವು ಸತ್ಯನಿಷೇಧಿಗಳಿಗೆ, ಅವರೇನು ಮಾಡಿ ಬಂದಿರುವರೆಂಬುದನ್ನು ಖಂಡಿತ ತಿಳಿಸುವೆವು ಮತ್ತು

وَلَئِنْ أَذَقْنَاهُ رَحْمَةً مِّنَّا مِن بَعْدِ
ضَرَّاءَ مَسَّتْهُ لَيَقُولَنَّ هَٰذَا لِي
وَمَا أَظُنُّ السَّاعَةَ قَائِمَةً وَلَئِن
رُّجِعْتُ إِلَىٰ رَبِّي إِنَّ لِي عِندَهُ لَلْحُسْنَىٰ ۚ
فَلَنُنَبِّئَنَّ الَّذِينَ كَفَرُوا بِمَا عَمِلُوا

*ಇಲ್ಲಿಂದ 25ನೆಯ ಕಾಂಡ ಆರಂಭ.

9. ಅರ್ಥಾತ್- ಪುನರುತ್ಥಾನ ದಿನ.

وَلَنُذِيقَنَّهُم مِّنْ عَذَابٍ غَلِيظٍ ﴿٥٠﴾

ನಾವು ಅವರಿಗೆ ಬಹಳ ಹೊಲಸಾದ ಯಾತನೆಯ ಸವಿಯನ್ನು ಣಿಸುವೆವು.

وَإِذَا أَنْعَمْنَا عَلَى الْإِنسَانِ أَعْرَضَ
وَنَأَىٰ بِجَانِبِهِ وَإِذَا مَسَّهُ الشَّرُّ فَذُو
دُعَاءٍ عَرِيضٍ ﴿٥١﴾

51. ನಾವು ಮಾನವನಿಗೆ ಕೊಡುಗೆಗಳನ್ನು ನೀಡಿದಾಗ ಅವನು ವಿಮುಖ ನಾಗುತ್ತಾನೆ ಮತ್ತು ದರ್ಪ ತೋರುತ್ತಾನೆ. ಅವನಿಗೇನಾದರೂ ವಿಪತ್ತು ಸೋಂಕಿದರೆ ಉದ್ದುದ್ದ ಪ್ರಾರ್ಥನೆಗಳನ್ನು ಸಲ್ಲಿಸುತ್ತಾನೆ.

قُلْ أَرَأَيْتُمْ إِن كَانَ مِنْ عِندِ
اللَّهِ ثُمَّ كَفَرْتُم بِهِ مَنْ أَضَلُّ مِمَّنْ
هُوَ فِي شِقَاقٍ بَعِيدٍ ﴿٥٢﴾

52. ಸಂದೇಶವಾಹಕರೇ, ಇವರೊಡನೆ ಹೇಳಿರಿ, "ನಿಜಕ್ಕೂ ಈ ಕುರ್‌ಆನ್ ಅಲ್ಲಾಹನ ಕಡೆಯಿಂದಲೇ ಬಂದಿದ್ದರೆ ಮತ್ತು ನೀವು ಇದನ್ನು ನಿರಾಕರಿಸುತ್ತಲೇ ಇದ್ದರೆ, ಇದನ್ನು ವಿರೋಧಿಸುವುದರಲ್ಲಿ ಬಹುದೂರ ಹೋಗಿಬಿಟ್ಟವನಿಗಿಂತ ದೊಡ್ಡ ಪಥಭ್ರಷ್ಟನು ಇನ್ನಾರಿರಬಹುದೆಂದು ನೀವೆಂದಾದರೂ ಆಲೋಚಿಸಿದಿರಾ?"

سَنُرِيهِمْ آيَاتِنَا فِي الْآفَاقِ وَفِي أَنفُسِهِمْ
حَتَّىٰ يَتَبَيَّنَ لَهُمْ أَنَّهُ الْحَقُّ أَوَلَمْ
يَكْفِ بِرَبِّكَ أَنَّهُ عَلَىٰ كُلِّ شَيْءٍ شَهِيدٌ ﴿٥٣﴾

53. ಶೀಘ್ರವೇ, ನಾವು ಇವರಿಗೆ ಈ ಜಗತ್ತಿನಲ್ಲೂ, ಸ್ವತಃ ಇವರೊಳಗೂ ಇರುವ ನಮ್ಮ ದೃಷ್ಟಾಂತಗಳನ್ನು ತೋರಿಸಿಕೊಡುವೆವು- ಈ ಕುರ್‌ಆನ್ ನಿಜವಾಗಿಯೂ ಸತ್ಯವಾಗಿದೆ ಎಂಬುದು ಇವರಿಗೆ ವ್ಯಕ್ತವಾಗುವ ತನಕ, ನಿಮ್ಮ ಪ್ರಭು ಸಕಲ ವಿಷಯಗಳಿಗೂ ಸಾಕ್ಷಿಯಾಗಿರುತ್ತಾನೆಂಬುದು ಸಾಲದೇ?

أَلَا إِنَّهُمْ فِي مِرْيَةٍ مِّن لِّقَاءِ رَبِّهِمْ
أَلَا إِنَّهُ بِكُلِّ شَيْءٍ مُّحِيطٌ ﴿٥٤﴾

54. ಚೆನ್ನಾಗಿ ತಿಳಿದುಕೊಳ್ಳಿರಿ. ಇವರು ತಮ್ಮ ಪ್ರಭುವನ್ನು ಭೇಟಿಯಾಗಲಿರುವ ಕುರಿತು ಸಂದೇಹದಲ್ಲಿದ್ದಾರೆ. ಚೆನ್ನಾಗಿ ತಿಳಿದಿರಿ. ಅವನು ಸಕಲ ವಸ್ತುಗಳನ್ನು ಆವರಿಸಿರುತ್ತಾನೆ.[10]

10. ಅರ್ಥಾತ್- ಯಾವುದೇ ವಸ್ತು ಅವನ ಹಿಡಿತದಿಂದ ಮುಕ್ತವಾಗಿಯಾಗಲಿ ಅವನ ಜ್ಞಾನದಿಂದ ಮರೆಯಾಗಿಯಾಗಲಿ ಇಲ್ಲ.